ಜೆಎಸ್‌ಎಸ್ ಮಹಾವಿದ್ಯಾಪೀಠ

# ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು

ಭಾರತ ಸರ್ಕಾರದ ಡಿಬಿಟಿಯಿಂದ "ಸ್ಟಾರ್ ಕಾಲೇಜ್ ಸ್ಕೀಮ್" ಅಡಿಯಲ್ಲಿ ಗುರುತಿಸಲ್ಪಟ್ಟಿದೆ
(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ * ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ)

ESTD - 1964

ಊಟಿರಸ್ತೆ, ಮೈಸೂರು-೫೭೦ ೦೨೫

50 ವರ್ಷಗಳು

☎ 0821-2548236 & 2548380 Fax: 0821-2548238 E-mail: jssautonomous@gmail.com

ದಿನಾಂಕ : 31-03-2015

## ಪ್ರಕಟಣೆಯ ಕೃಪೆಗಾಗಿ

## "ಪ್ರತಿಭಾ–2015 ಮತ್ತು 'ಪ್ರದ್ಯುತ್' ವಾಣಿಜ್ಯ ಮತ್ತು ನಿರ್ವಹಣಾ ಹಬ್ಬ" ಅಂತರ ಕಾಲೇಜು ಸ್ಪರ್ಧೆಗಳ ಉದ್ಘಾಟನೆ

ಮೈಸೂರು, ದಿ. 30 – ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ಸಮುಚ್ಚಯ, ಊಟಿ ರಸ್ತೆ ಇಲ್ಲಿನ ವಾಣಿಜ್ಯ ಮತ್ತು ನಿರ್ವಹಣಾ ವಿಭಾಗವು ಜಗದ್ಗುರು ಡಾ. ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮೀಜಿಗಳವರ ಜನ್ಮಶತಾಬ್ದಿ ಹಾಗೂ ಕಾಲೇಜಿನ ಸುವರ್ಣ ಮಹೋತ್ಸವದ ಹಿನ್ನೆಲೆಯಲ್ಲಿ ಏರ್ಪಡಿಸಿದ್ದ "ಪ್ರತಿಭಾ–2015 ಮತ್ತು ಪ್ರದ್ಯುತ್ ವಾಣಿಜ್ಯ ಮತ್ತು ನಿರ್ವಹಣಾ ಹಬ್ಬ"ದ ಉದ್ಘಾಟನೆಯನ್ನು ಮೈಸೂರು ನಗರಪಾಲಿಕೆಯ ಆಯುಕ್ತರಾದ ಡಾ. ಸಿ. ಜಿ. ಬೆಟ್‌ಸೂರುಮಠ್‌ರವರು ನೆರವೇರಿಸಿದರು

ಶ್ರೀಯುತರು ತಮ್ಮ ಉದ್ಘಾಟನಾ ಭಾಷಣದಲ್ಲಿ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡುತ್ತಾ, ಇದು ನಿಮ್ಮ ಹಬ್ಬ, ಖುಷಿಯಿಂದ, ಸಡಗರ, ಸಂಭ್ರಮದಿಂದ ಆಚರಿಸಿ ಎಂದರಲ್ಲದೆ, ಇಂದಿನ ಯುಗ ಬಹಳ ವೇಗದಿಂದ ಮುನ್ನುಗ್ಗುತ್ತಿದೆ, ಎಲ್ಲದರಲ್ಲೂ, ಎಲ್ಲರಲ್ಲೂ ಸ್ಪರ್ಧಾತ್ಮಕ ಗುಣಗಳು ಬೆಳೆಯುತ್ತಿವೆ. ಜಾಗತೀಕರಣ ಹಾಗೂ ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯಿಂದ ಪ್ರಪಂಚವು ಬದಲಾಗುತ್ತಿದೆ. ಇದಕ್ಕೆ ಹೊಂದಿಕೊಂಡು ಬಾಳುವುದನ್ನು ಕಲಿಯಬೇಕೆಂದರು. ಹಿಂದಿನ ಅನ್ವೇಷಣೆ ಇಂದು ಹಳೆಯದು, ಇಂದಿನ ಅನ್ವೇಷಣೆಗಳು ಮುಂದಿನ ಪೀಳಿಗೆಗೆ ಹಳತು, ಹೀಗೆ ನಾವು ಹೊಸ ಹೊಸ ಕಲ್ಪನೆ, ಅನ್ವೇಷಣೆಗೆ ಬದಲಾಗುತ್ತಾ, ಜೀವನ ರೂಪಿಸಿಕೊಂಡು ಬಾಳುತ್ತಿದ್ದೇವೆ. 21ನೇ ಶತಮಾನದ ನಾವು ಆಯ್ಕೆಯ ಪ್ರಕ್ರಿಯೆಯಲ್ಲಿ ತೊಡಗಿದ್ದೇವೆ. ಸರಿಯಾದ ಆಯ್ಕೆ ನಮ್ಮ ಜೀವನವನ್ನು ರೂಪಿಸುತ್ತದೆ ಎಂದರು. ನಾಯಕತ್ವ ಗುಣ, ಜವಾಬ್ದಾರಿ ಮತ್ತು ಅರ್ಪಣಾ ಮನೋಭಾವದಿಂದ ಮಾತ್ರ ವಿದ್ಯಾರ್ಥಿಗಳ ಏಳಿಗೆ, ಅಭ್ಯುದಯ ಮತ್ತು ಸರ್ವತೋಮುಖ ಬೆಳವಣಿಗೆ ಸಾಧ್ಯ ಎಂದರಲ್ಲದೆ 'ಬಾಗ್ ಮಿಲ್ಕಾ ಬಾಗ್' ಎಂಬಂತೆ ವಿದ್ಯಾರ್ಥಿಗಳು ಎಚ್ಚರಿಕೆಯಿಂದ ಹೋರಾಡುವುದನ್ನು ಕಲಿಯಬೇಕು ಎಂದು ಕರೆಕೊಟ್ಟರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮೈಸೂರಿನ ಚಾಮುಂಡೇಶ್ವರಿ ವಿದ್ಯುತ್ ಪ್ರಸರಣ ನಿಗಮದ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಡಿ. ಕಿರಣ್‌ರವರು ಮಾತನಾಡುತ್ತಾ, ಇಂದಿನ ಯುಗ 'ಮಾಹಿತಿ ಯುಗ'. 21ನೇ ಶತಮಾನದಲ್ಲಿ ಮಾಹಿತಿಯು ಒಂದು ಶಕ್ತಿ. ಮಾಹಿತಿಯಿಂದ ಎಂತಹ ಜ್ಞಾನವನ್ನಾದರೂ ಸಂಪಾದಿಸಬಹುದು. ಮನುಜ 'ಗೋರಿಲ್ಲಾ ಲಕ್ಷಣ'ಗಳಾದ ನಾನು, ನನ್ನಿಂದ, ನಾನೇ ಎಲ್ಲಾ ಎಂಬ ಅಭಿಪ್ರಾಯವನ್ನು ಅವಲಂಬಿಸದೆ, ಮನಸ್ಸನ್ನು ಸಮತೋಲನದಲ್ಲಿ ನಡೆಸಿಕೊಂಡು ಬಾಳುವುದನ್ನು ಕಲಿಯಬೇಕೆಂದರು. ವಿದ್ಯಾರ್ಥಿಗಳು ತಮ್ಮ ಗುರಿಯನ್ನು ಸಾಧಿಸಲು ಇಂದಿನ ವೇಗ, ಆಯ್ಕೆ ಹಾಗೂ ಮಾಹಿತಿ ಯುಗದೊಂದಿಗೆ, ಸಮಾಜದ ಏಳಿಗೆಗಾಗಿ ಪಣತೊಡಬೇಕೆಂದರು.

ಅಧ್ಯಕ್ಷತೆ ವಹಿಸಿದ್ದ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ಹೆಚ್ಚುವರಿ ನಿರ್ದೇಶಕರಾದ ಡಾ. ಮೃತ್ಯುಂಜಯ ಪಿ. ಕುಳೇನೂರ್ ಮಾತನಾಡಿ, ವಾಣಿಜ್ಯ ಮತ್ತು ನಿರ್ವಹಣಾ ವಿಷಯವು ಇಂದು ಹೆಚ್ಚು ಪ್ರಚಲಿತದಲ್ಲಿದ್ದು, ಹೆಚ್ಚು ಅವಕಾಶಗಳು ಲಭ್ಯವಿದೆ. ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆದು, ದೇಶೋದ್ಧಾರದ ಕಡೆಗೆ ಗಮನಹರಿಸಿ, ನಿಮಗೆ ಒಳ್ಳೆಯದಾಗಲಿ ಎಂದು ಹಾರೈಸಿದರು.

ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ಸಹಾಯಕ ನಿರ್ದೇಶಕರಾದ ಶ್ರೀ ಬಿ. ನಿರಂಜನಮೂರ್ತಿ, ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ. ವಿ. ಸಾಂಬಶಿವಯ್ಯ, ಪ್ರಾಂಶುಪಾಲರಾದ ಪ್ರೊ. ಎಂ.ಬಿ.ಮಲ್ಲಿಕಾರ್ಜುನ ಪಂಡಿತ್ ಹಾಗೂ ವಾಣಿಜ್ಯ ಮತ್ತು ನಿರ್ವಹಣಾ ವಿಭಾಗದ ಮುಖ್ಯಸ್ಥರಾದ ಡಾ. ಎಸ್. ಶಂಕರಪ್ಪರವರುಗಳು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕು. ಶ್ರೀಹರಿ "ಪ್ರತಿಭಾ–2015 ಮತ್ತು "ಪ್ರದ್ಯುತ್ ವಾಣಿಜ್ಯ ಮತ್ತು ನಿರ್ವಹಣಾ ಹಬ್ಬ"ದ ಬಗ್ಗೆ ವಿವರಣೆ ಕೊಟ್ಟರು. ಕು. ರೂಪಶ್ವಿನಿ ಗಣ್ಯವ್ಯಕ್ತಿಗಳನ್ನು ಪರಿಚಯಿಸಿದರು. ಕು. ಸುಶ್ಮಿತಾ ಮತ್ತು ತಂಡದವರು ಪ್ರಾರ್ಥಿಸಿದರು. ಕು. ತನುಶ್ರೀ ವಂದನಾರ್ಪಣೆ ಮಾಡಿದರು. ಕು. ಅಭಿರಾಂ ಮತ್ತು ಕು. ತೇಜಸ್ವಿನಿ ಕಾರ್ಯಕ್ರಮ ನಿರೂಪಿಸಿದರು. ಸಮಾರಂಭದಲ್ಲಿ 250 ಕ್ಕೂ ಹೆಚ್ಚು ವಿದ್ಯಾರ್ಥಿಗಳು ವಿವಿಧ ಕಾಲೇಜುಗಳಿಂದ ಪಾಲ್ಗೊಂಡು, ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಕಾರ್ಯಕ್ರಮದಲ್ಲಿ ಕಾಲೇಜಿನ ಉಪನ್ಯಾಸಕ ವರ್ಗದವರು ಹಾಗೂ ಬೋಧಕೇತರ ಸಿಬ್ಬಂದಿಗಳು ಹಾಜರಿದ್ದು ಸಮಾರಂಭಕ್ಕೆ ಕಳೆಕಟ್ಟಿತ್ತು.

(ಎಂ.ಬಿ. ಮಲ್ಲಿಕಾರ್ಜುನ ಪಂಡಿತ್)

ಪ್ರಾಂಶುಪಾಲರು
ಜೆ. ಎಸ್. ಎಸ್. ಕಾಲೇಜು
ಊಟಿ ರಸ್ತೆ, ಮೈಸೂರು.570 025

ಗೆ,

ಸಂಪಾದಕರು

______________________ ದಿನಪತ್ರಿಕೆ

______________________

ಮೈಸೂರು